<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>

<u>S.C.183/2022</u>

PW- 15

CW- 22

ಪ್ರ. ಬೋ. ದಿನಾಂಕಃ 06-11-2024

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ರೂಪಾ ತೆಂಬದ್ |
| ತಂದೆ/ ಗಂಡನ ಹೆಸರು | : | ನಟರಾಜ್ ತೆಂಬದ್ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಪಿಎಸ್ ಐ , ಸಿಇಎನ್ ಪೊಲೀಸ್ ಠಾಣೆ |
| ವಾಸ | : | ದಾವಣಗೆರೆ. |

<u>ಮುಖ್ಯ ವಿಚಾರಣೆಃ</u> ಸಾಕ್ಷಿ ಯಿಂದ ಸ್ವತಹಃ-

ದಿ.19-09-2021 ರಿಂದ 15-07-2022ರ ವರೆಗೆ ನಾನು ಹದಡಿ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.16-09-2021 ರಂದು ಈ ಕೇಸಿನ ಕಡತವನ್ನು ಚಾಸಾ-21 ರವರಿಂದ ಪಡೆದು ಪರಿಶೀಲಿಸಿರುತ್ತೇನೆ. ದಿ.12-10-2021 ರಂದು ಪಿಸಿ-46 ಹಾಲಯ್ಯ್ ರವರು ದಾವಣಗೆರೆ ಸಿಜಿ ಆಸ್ಪತ್ರೆಯಲ್ಲಿ ವೈದ್ಯರು ನೀಡಿದ ವರದಿ ಹಾಜರುಪಡಿಸಿದ್ದು , ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿರುತ್ತೇನೆ. ಸದರಿ ವರದಿ ನೋಡುತ್ತಿದ್ದು, ನಿಪಿ.14 ಎಂದು ಈಗಾಗಲೇ ಗುರುತಿಸಲಾಗಿದೆ. ಅದರಲ್ಲಿರುವ ನನ್ನ ರುಜುವನ್ನು ನಿಪಿ.14(ಎ) ಎಂದು ಗುರುತಿಸಲಾಯಿತು. ದಿ.24-10-2021 ರಂದು ಸಾಕ್ಷಿ ಚಾಸಾ-13 ಕಮಲಮ್ಮ ಮತ್ತು ಚಾಸಾ-14 ಓಬಳಪ್ಪ ಇವರು ನನ್ನ ಮುಂದೆ ಹೇಳಿಕೆ ಪಡೆದಿರುತ್ತೇನೆ. ಫಿರ್ಯಾದಿ ಚಾಸಾ-1 ರವರು ಆರೋಪಿ ಮತ್ತು ಮೃತರು ಜೊತೆಯಲ್ಲಿರುವ ಫೋಟೋ ಹಾಜರುಪಡಿಸಿದ್ದು , ಅದನ್ನು ಸ್ವೀಕರಿಸಿ, ಕಡತಕ್ಕೆ ಅಳವಡಿಸಿರುತ್ತೇನೆ. ಸದರಿ ಫೋಟೋ ನೋಡುತ್ತಿದ್ದು ,ಅ ದನ್ನು ಈಗಾಗಲೇ ನಿಪಿ.6 ಎಂದು ಈಗಾಗಲೇ ಗುರುತಿಸಲಾಗಿದೆ. ತನಿಖೆ ಪೂರ್ಣಗೊಂಡಿದ್ದು , ಆರೋಪಿತರ ಮೇಲೆ ಆರೋಪ ಸಾಬೀತಾಗಿದ್ದರಿಂದ ಮಾನ್ಯ

ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

ಚಾಸಾ–13 ಮತ್ತು 14 ಇವರು ನನ್ನ ಮುಂದೆ ನಿಪಿ.11 ಮತ್ತು 12 ರಂತೆ ಹೇಳಿಕೆ ನೀಡಿರುತ್ತಾರೆ.

ಪಾಟೀಸವಾಲುಃ– ಆರೋಪಿತರ ಪರ ಶ್ರೀ ಆರ್ ಕೆ ವಕೀಲರಿಂದ.

ಚಾಸಾ–13 ಮತ್ತು 14 ಇವರು ನನ್ನ ಮುಂದೆ ನಿಪಿ.11 ಮತ್ತು 12 ರಂತೆ ಹೇಳಿಕೆ ನೀಡಿಲ್ಲ ಎನ್ನುವುದು ಸರಿಯಲ್ಲ. ಚಾಸಾ–13 ಮತ್ತು 14 ಇವರು ನನ್ನ ಮುಂದೆ ಹಾಜರಾಗಿಲ್ಲ , ಅವರು ನನ್ನ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲದಿದ್ದರೂ ಸಹ ಸದರಿ ಹೇಳಿಕೆಗಳನ್ನು ಸೃಷ್ಟನೆ ಮಾಡಿಕೊಂಡಿರುತ್ತೇನೆ ಎನ್ನುವುದು ಸುಳ್ಳು. ಮೃತ ಮಹಿಳೆ ಮತ್ತು 1 ನೇ ಆರೋಪಿ ಮದುವೆಯಾಗಿ ಸುಮಾರು 26 ವರ್ಷ ಆಗಿದೆ ಎಂದು ನನ್ನ ತನಿಖೆ ಸಮಯದಲ್ಲಿ ಕಂಡು ಬಂದಿದೆ. ಮೃತರಿಗೆ ಮೊಮ್ಮಕ್ಕಳು ಸಹ ಇದ್ದಿರಬಹುದು , ನನಗೆ ಗೊತ್ತಿಲ್ಲ. ಮೃತಳ ಮಗಳ ಗಂಡನ ಮನೆಯವರು 1 ನೆೀ ಆರೋಪಿಗೆ ಮತ್ತು ಮೃತಳ ಹೆಸರಿಗೆ ಮಾಡಿಕೊಡುವಂತೆ ಮೃತಳಿಗೆ ಕಿರುಕುಳ ಕೊಡುತ್ತಿದ್ದರು ಎನ್ನುವುದು ಸುಳ್ಳು. 1 ನೇ ಆರೋಪಿ ಮತ್ತು ಮೃತಳು ಇವರು ನಾವು ಜೀವಿತವಿರುವವರೆಗೆ ಸದರಿ ಆಸ್ತಿಯನ್ನು ಯಾರ ಹೆಸರಿಗೂ ಮಾಡಿಕೊಡುವುದಿಲ್ಲ ಎಂದು ಹೇಳುತ್ತಿದ್ದರು ಎನ್ನುವುದು ಸುಳ್ಳು. ಮೃತಳ ಎರಡೂ ಹೆಸರಿಗೆಯು ಶಸ್ತ್ರ ಚಿಕಿತ್ಸೆ ಮೂಲಕ ಆಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಒಟ್ಟಾರೆ ಮೃತಳ ಆರೋಗ್ಯ ಸರಿಯಾಗಿರಲಿಲ್ಲ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ.

ನಾನು ಈ ಕೇಸಿನಲ್ಲಿ ಸಮರ್ಪಕ ತನಿಖೆ ಮಾಡದೇ ಯಾಂತ್ರಿಕವಾಗಿ ನ್ಯಾಯಾಲಯಕ್ಕೆ ದೊಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎನ್ನುವುದು ಸುಳ್ಳು. ನನ್ನ ತನಿಖೆಯಲ್ಲಿ ಆರೋಪಿತರು ಯಾವುದೇರೀತಿಯ ಅಪರಾಧ ಮಾಡಿಲ್ಲವೆಂದು ನನಗೆ ಕಂಡುಬಂದಿದ್ದರೂ ಸಹ ಆರೋಪಿತರ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿ , ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ– ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/–

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು, ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.183/2022

PW- 14

CW- 16

ಪ್ರ. ಬೋ. ದಿನಾಂಕಃ 06-11-2024

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಶಿವಕುಮಾರ್ |
| ತಂದೆ/ಗಂಡನ ಹೆಸರು | : | ಮಂಜುನಾಥ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ಪೊಲೀಸ್ ಪೇದೆ-238 , ದಕ್ಷಿಣ ಸಂಚಾರಿ ಪೊಲೀಸ್ ಠಾಣೆ, ದಾವಣಗೆರೆ |
| ವಾಸ | : | ದಾವಣಗೆರೆ. |

ಮುಖ್ಯ ವಿಚಾರಣೆಃ ಸಾಕ್ಷಿ ಯಿಂದ ಸ್ವತಹಃ-

2017 ರಿಂದ ಆಗಸ್ಟ-2024ರ ವರೆಗೆ ನಾನು ಹದಡಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.20-06-2021 ರಂದು ಶಾಘಲೆ ಗ್ರಾಮದ ಮೃತಳ ಮನೆ ಹತ್ತಿರ ಪಿಎಸ್ಐ ರವರು ನನ್ನನ್ನು ಕರೆದುಕೊಂಡು ಹೋಗಿದ್ದು, ಠಾಣೆಗೆ ಸರಬರಾಜಾಗಿದ್ದ ಕ್ಯಾಮರಾದಿಂದ ಶವ ಪಂಚನಾಮೆ ಕಾಲಕ್ಕೆ ಫೋಟೋಗಳನ್ನು ತೆಗೆದಿರುತ್ತೇನೆ. ಸದರಿ ಫೋಟೋಗಳನ್ನು ಈಗಾಗಲೇ ನಿಪಿ.4 ಮತ್ತು 5 ಎಂದು ಗುರುತಿಸಲಾಗಿದೆ. ದಾವಣಗೆರೆಯ ಸಂಮೃದ್ಧಿ ಸ್ಟೂಡಿಯೋದಲ್ಲಿ ಪ್ರಿಂಟ್ ಹಾಕಿಸಿ ಫೋಟೋಗಳನ್ನು ಮತ್ತು ಸಾಕ್ಷ್ಯ ಅಧಿನಿಯಮ ಕಲಂ.65(ಬಿ) ಪ್ರಮಾಣಪತ್ರ ನೀಡಿರುತ್ತೇನೆ. ಸದರಿ ಪ್ರಮಾಣಪತ್ರ ನೋಡುತ್ತಿದ್ದು, ಅದರಲ್ಲಿನ ನನ್ನ ರುಜುವನ್ನು ನಿಪಿ.16(ಎ) ಎಂದು ಗುರುತಿಸಲಾಯಿತು.

ಪಾಟೀಸವಾಲುಃ- ಆರೋಪಿತರ ಪರ ಶ್ರೀ ಆರ್ ಕೆ ವಕೀಲರಿಂದ.

ಸಂಮೃದ್ಧಿ ಸ್ಟೂಡಿಯೋದಲ್ಲಿ ಫೋಟೋ ಪ್ರಿಂಟ್ ಹಾಕಿಸಿದ ಬಗ್ಗೆ ಬಿಲ್

ಕೊಟ್ಟಿರುತ್ತಾರೆ. ಅದಕ್ಕೆ ನಾನು ಹಣ ಪಾವತಿಸಿರುತ್ತೇನೆ. ಪಿಎಸ್ಐ ಪ್ರಸಾದ್ ರವರು ಹಣ ಕೊಟ್ಟಿರುತ್ತಾರೆ. ಬಿಲ್ಲನ್ನು ನಾನು ಪಿಎಸ್ಐ ಪ್ರಸಾದ್ ರವರ ಬಳಿ ಕೊಟ್ಟಿರುತ್ತೇನೆ. ಸ್ಥಳ ಮಹಜರ್ ಮತ್ತು ಶವ ಪಂಚನಾಮೆ ಮಾಡುವ ಸಮಯದಲ್ಲಿ ನಾನು ಫೋಟೋ ತೆಗೆದಿರುತ್ತೇನೆ ವಿನಹ ಸದರಿ ಮಹಜರ್ ಗಳಿಗೆ ನಾನು ಸಹಿ ಮಾಡಿರುವುದಿಲ್ಲ. ಫೋಟೋಗಳ ನಿಖರತೆ ಮತ್ತು ಮೂಲದ ಬಗ್ಗೆ ನಿಪಿ.16 ಪ್ರಮಾಣಪತ್ರದಲ್ಲಿ ನಮೂದಿಸಿರುವುದಿಲ್ಲ. ನಾನು ಸ್ಥ,ಳಕ್ಕೆ ಹೋಗಿಲ್ಲ , ಫೋಟೋ ತೆಗೆಯದಿದ್ದರೂ ಸಹ ನಿಪಿ.16 ಪ್ರಮಾಣಪತ್ರವನ್ನು ತನಿಖಾಧಿಕಾರಿಗೆ ಸಹಾಯ ಮಾಡಲು ಸೃಷ್ಟನೆ ಮಾಡಿ ನೀಡಿರುತ್ತೇನೆ ಎನ್ನುವುದು ಸುಳ್ಳು.

<u>ಮರು ವಿಚಾರಣೆಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.